SRI A. B. JAKANUR (Minister for Co-operation).—

(a) It is a fact that a case was registered for misappropriation of funds against the said party. But Government have not issued any stay order on criminal case.

(b) Does not arise.

ಚುಕ್ಕೆ ಪ್ರಶ್ನೆ ೪೯೧ (೩೯೩) 'ಆ' ಪ್ರಶ್ನೆಗೆ ಉತ್ತರದಲ್ಲಿ ಇಂಗ್ಲಿಷ್‌ನಲ್ಲಿ "ಎಸ್" ಎಂತಲೂ, ಕನ್ನಡದಲ್ಲಿ ನಿಜವೆಂತಲೂ ಇರುವುದನ್ನು ತಿದ್ದುಪಡಿಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ವಿಶ್ವನಾಥ್.—ಕೃಷ್ಣೆಗೌಡರು ಹಣದ ದುರುಪಯೋಗ ಮಾಡಿದ್ದಾರೆಂದು ಕೋರ್ಟಿನಲ್ಲಿ ದಾವ ಹಾಕಿರುವುದು ನಿಜವಾಗಿದ್ದರೆ, ದಾವ ಕೊರ್ಟಿನಲ್ಲಿ ದಾವ ಹಾಕಲಾಗಿದೆ ಮತ್ತು ಅದು ಯಾವ ಹಂತದಲ್ಲಿದೆ, ದುರುಪಯೋಗದ ಮೊತ್ತ ಎಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಬಿ. ಜಕನೂರ್.—೧೯೭೧-೭೨ ನೇ ಸಾಲಿಗೆ ದುರುಪಯೋಗದ ಮೊತ್ತ ರೂ. ೯,೯೦೩-೪೬ ಪೈಸೆ ೧೯೭೨-೭೩ನೇ ಸಾಲಿಗೆ ದುರುಪಯೋಗದ ಮೊತ್ತ ರೂ. ೬೧೫೭-೭೫ ಪೈಸೆ. ದುರುಪಯೋಗ ಮಾಡಿದ್ದು ೧೯೭೧-೭೨ನೇ ಸಾಲಿನಲ್ಲಿ ಆ ಹಣದ ವಸೂಲಾತಿಗಾಗಿ ದಾವಾ ಹಾಕಿ ಟ್ರಿಬ್ಯುನಲ್‌ರೀತ್ಯ, ೬೯ನೇ ಪ್ರಕರಣದನ್ವಯ, ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ, ೧೯೭೨-೭೩ನೇ ಸಾಲಿಗೆ ದಾವ ಹಾಕಿ ಆರ್ಡರ್ ಆಗಿದ್ದು ಅಪಿಲೆಟ್ ಟ್ರಿಬ್ಯುನಲ್‌ನಲ್ಲಿ ಕನ್‌ಫರ್ಮ್ ಆಗಿ, ಹೈಕೋರ್ಟಿಗೆ ಹೋಗಿದ್ದಾರೆ. ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ.

ಶ್ರೀ ಹೆಚ್. ವಿಶ್ವನಾಥ್.—ಇದೇ ಸೊಸೈಟಿಯಲ್ಲಿ ಇವರ ಜೊತೆಯಲ್ಲಿ ಕಾರ್ಯದರ್ಶಿಯಾಗಿದ್ದ ಕೃಷ್ಣಪ್ಪ ಎನ್ನುವವರ ಮೇಲೆ ೯ ಸಾವಿರ ರೂಪಾಯಿಗಳ ದುರುಪಯೋಗದ ಆಪಾದನೆ ಇತ್ತು. ಅವರು ಆ ದುಡ್ಡನ್ನು ಸೊಸೈಟಿಗೆ ವಾಪಸ್ಸು ಕಟ್ಟಿದ ಮೇಲೆ ಅವರನ್ನು ಕೆಲಸಕ್ಕೆ ಮತ್ತೆ ತೆಗೆದುಕೊಂಡಿದ್ದಾರೆ. ಅದೇ ರೀತಿ ಇನ್ನೊಬ್ಬರೂ ಕೂಡ ಸೊಸೈಟಿಗೆ ದುಡ್ಡನ್ನು ಕಟ್ಟಿದರೆ ಇವರನ್ನೂ ವಾಪಸ್ಸು ಕೆಲಸಕ್ಕೆ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಬಿ. ಜಕನೂರ್.—ಆಪಾದನೆಯು ಕೇಸು ಹಾಕಿದ್ದೇವೆ. ಆ ಕೇಸು ಕೃಷ್ಣರಾಜನಗರ ಪ್ರಥಮ ದರ್ಜೆ ನ್ಯಾಯಾಲಯದ ಮುಂದಿರುವುದರಿಂದ ಅವರು ದುಡ್ಡನ್ನು ಕಟ್ಟಿದರೂ ಕೆಲಸಕ್ಕೆ ತೆಗೆದು ಕೊಳ್ಳುವುದಕ್ಕೆ ಬರುವುದಿಲ್ಲ.

Construction of Mugukoppa Bridge in Haliyal Taluk.

505 SRI V. M. GHADI (Haliyal).—Will the Chief Minister be pleased to state :—

(a) whether it is fact that the work (construction) of the Mugukoppa bridge to Tattihalla Nala in Haliyal Taluk, Karwar District has been included in the Budget Estimates from the year 1972-73 and 1979-80;

(b) if so, the reason for not including in this year's budget;

(c) whether, the local MLA has represented this case to the Government;

(d) if so what action the Government has taken to include the same in the Budget;

(e) whether it is a fact the Plans and Estimates of the said work have been sent to Government ?

SRI S. BANGARAPPA (Minister for Revenue and Agriculture).—on behalf of SRI R. GUNDU RAO (Chief Minister .—

(a) Yes.

(b) Due to paucity of funds.

(c) Yes.

(d) In view of reply to (b) above this could not be included in the Budget Estimate.

(e) Yes.

ಶ್ರೀ ವಿ. ಎಂ. ಘಾಟಿ —ಸ್ವಾಮಿ. ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ಹಣದ ಕೊರತೆ ಇದೆ ಎಂಬುದಾಗಿ ಹೇಳಿದ್ದೀರಿ. ಈ ಸೂಗಕುಪ್ಪ ಸೇತುವೆ ಕೆಲಸವನ್ನು ೧೯೭೧-೭೨ರಿಂದ ೧೯೭೯-೮೦ನೇ ಸಾಲಿನವರೆಗೂ ಒಂದೇ ಸಮನೆ ಆಯವ್ಯಯ ಅಂದಾಜು ಪತ್ರದಲ್ಲಿ ಸೇರಿಸುತ್ತಾ ಬಂದಿರುತ್ತೀರಿ. ಆವತ್ತಿನಿಂದ ಈವತ್ತಿನವರೆಗೂ ನಿಮಗೆ ಹಣದ ಕೊರತೆ ಇದ್ದೇ ಇದೆಯೇ ? ತಮಗೆ ಹೇಳುವುದಾದರೆ,

೧೯೭೧-೭೨ ರಲ್ಲಿ	೧೫,೦೦೦-೦೦
೧೯೭೨-೭೩ ರಲ್ಲಿ	೨೦ ೦೦೦-೦೦
೧೯೭೩-೭೪ ರಲ್ಲಿ	೩೦,೦೦೦-೦೦
೧೯೭೪-೭೫ ರಲ್ಲಿ	೧೫,೦೦೦-೦೦
೧೯೭೬-೭೭ ರಲ್ಲಿ	೨೦ ೦೦೦-೦೦
೧೯೭೮-೭೯ ರಲ್ಲಿ	೨೦,೦೦೦-೦೦

ರೂಪಾಯಿಗಳನ್ನು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿದ್ದೀರಿ. ಆದರೆ ಇಲ್ಲಿ ನೋಡಿದರೆ ಹಣದ ಕೊರತೆ ಇದೆಯೆಂದು ಉತ್ತರ ಕೊಟ್ಟಿದ್ದೀರಿ. ಇಂಥ ಒಂದು ತಾರತಮ್ಯ ಮಾಡಲು ಕಾರಣ ಏನು ?

ಶ್ರೀ ಎಸ್. ಬಂಗಾರಪ್ಪ.-ನನ್ನ ಉತ್ತರದಲ್ಲೇ ತಮಗೆ ಸ್ಪಷ್ಟವಾಗಿ ಹೇಳಿದ್ದೇನೆ.ಹಣದ ಕೊರತೆ ಇರುವುದರಿಂದ ಈ ಸೇತುವೆ ಕಾಮಗಾರಿಯನ್ನು ಮುಂದಕ್ಕೆ ಹಾಕಿಕೊಂಡು ಬಂದಿರುವುದು ಸರಿ. ನನ್ನ ಉತ್ತರವನ್ನು ನೋಡಿದಮೇಲೆ ತಾವು ಇನ್ನೊಂದು ಪ್ರಶ್ನೆಯನ್ನು ಕೇಳುವುದು ಅನವಶ್ಯಕವೆಂದು ಭಾವಿಸುತ್ತೇನೆ. ಅಂತೂ Since the estimate is not a big one I think this work can be taken up very urgently. ಆದುದರಿಂದಲೇ ಈ ಸಾಲಿನ ಸೇತುವೆ ಕಾಮಗಾರಿಯಲ್ಲಿ ಸೂಗಕುಪ್ಪ ಸೇತುವೆ ನಿರ್ಮಾಣದ ಕಾರ್ಯವನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ಸಂಬಂಧಪಟ್ಟವರಿಗೆ ಸೂಚನೆ ಕೊಡುತ್ತೇನೆ. ಇದು ಕೇವಲ ಒಂದೂವರೆ ಲಕ್ಷ ರೂಪಾಯಿಯ ಅಂದಾಜಿನದು ಆಗಿರುವುದರಿಂದ ಇದನ್ನು ಪ್ರಸಕ್ತ ಸಾಲಿನಲ್ಲಿ ತೆಗೆದುಕೊಳ್ಳುವುದರಲ್ಲಿ ತೊಂದರೆ ಏನೂ ಆಗುವುದಿಲ್ಲ. I know the anxiety of the Hon.member because they will have to walk for nearly 5 or 6 miles in a deviation route. That is why the Hon.member is very serious about it. I think the Government should take it up immediately.